

ಟಿಬೆಟ್ ಅಧ್ಯಯನ ತಂಡದ ರೂವಾರಿ ಸ್ಕಾಫರ್

ಅನುಷ್ಠಾನಕ್ಕೆ ಒಪ್ಪಿಗೆ ನೀಡಲು ಬೇರೆಯ ಕಾರಣಗಳೆ ಇದ್ದವು. ಪ್ರಮುಖವಾಗಿ ಎರಡು ರಹಸ್ಯ ಉದ್ದೇಶಗಳಿದ್ದವು.

ಒಂದು– ತಮ್ಮ ವಂಶದ ಮೂಲ ಜನಾಂಗವನ್ನು ಹುಡುಕುವುದು. ಆಗಿನ ಸಮಯದಲ್ಲಿ ಇಡೀ ನಾಜಿ ಪಂಥದವರು ತಾವು ಮಾನವ ಕುಲದಲ್ಲಿಯೆ ಉನ್ನತ ಜನಾಂಗವಾದ ಆರ್ಯರು ಎಂದು ನಂಬಿರುತ್ತಾರೆ. ಆದರೆ ಯುರೋಪಿನಾದ್ಯಂತ ಇರುವ ಇತರೆ ಹೀನ ಕುಲದವರಿಂದ ಅವರ ಆರ್ಯರಕ್ತ ಕಲುಷಿತಗೊಳ್ಳುತ್ತಿದೆಯೆಂದೂ, ಅದನ್ನು ಶುದ್ಧೀಕರಿಸಿ ಮೂಲ ಆರ್ಯರಕ್ತವನ್ನು ಮತ್ತೆ ನೆಲೆಯಾಗಿಸಬೇಕೆಂದೂ ಯೋಚಿಸುತ್ತಿರುತ್ತಾರೆ. ಇದಕ್ಕಾಗಿ, ವೇದಗಳಂತಹ ಪವಿತ್ರ ಮತ್ತು ಉನ್ನತ ಗ್ರಂಥಗಳ ರಚನೆಗೆ ಕಾರಣರಾದ ಮೂಲ ಆರ್ಯರನ್ನು ಹುಡುಕಿ ಅವರನ್ನು ತಮ್ಮ ಕೋಮಿನ ರಕ್ತ ವೃದ್ಧಿಸುವ ಕಾರ್ಯಕ್ಕೆ ತೊಡಗಿಸಿಕೊಳ್ಳಲು ಕಾತುರರಾಗಿರುತ್ತಾರೆ. ಅವರನ್ನು ಎಲ್ಲಿ ಹುಡುಕುವುದು? ಈ ಕಾರಣಕ್ಕಾಗಿಯೆ ಅವರು ಭಾರತದ ವಾಯವ್ಯ ಮತ್ತು ಉತ್ತರದತ್ತ ಕಣ್ಣು ಹಾಯಿಸುತ್ತಾರೆ. ವೇದಗಳ ರಚನೆಯಾಗಿರುವುದು ಅಫ್ಘಾನಿಸ್ತಾನ, ಪಾಕಿಸ್ತಾನ, ಕಾಶ್ಮೀರದ ಸುತ್ತಲ ಪ್ರದೇಶಗಳಲ್ಲಿ ಎನ್ನುವುದು ಒಂದು ನಂಬಿಕೆಯಾದರೆ, ಹಿಮ್ಲರ್‌ನ ಸುತ್ತಲಿನ ವಿಚಾರ ಕೂಟ ಟಿಬೆಟ್ ಕಡೆಗೆ ತನ್ನ ದೃಷ್ಟಿ ಹರಿಸಿರುತ್ತದೆ. ಕಾರಣ ಹಿಮ್ಲರ್‌ಗಿದ್ದ ಮತ್ತೊಂದು ಹುಚ್ಚು. ಆ ಹುಚ್ಚೇ ಆತ ಸ್ಕಾಫರ್‌ನ ಯೋಜನೆಯಲ್ಲಿ ಆಸಕ್ತಿ ತೋರಲು ಎರಡನೆ ಕಾರಣ.

ಎರಡು– ಆ ಸಮಯದಲ್ಲಿ ಜರ್ಮನಿಯಲ್ಲಿ ಪ್ರಚಲಿತವಿದ್ದ **Glacial Cosmogony**, ಅಂದರೆ ‘ಹಿಮಶಿಲೋದ್ಭವ ವಿಶ್ವ’ ಎನ್ನಬಹುದಾದ ವಿಚಿತ್ರ ಪ್ರತಿಪಾದನೆ ಹಿಮ್ಲರ್‌ಗೆ



ಟಿಬೆಟ್‌ನಲ್ಲಿ ದೇಸಿ ಸಹಾಯಕರೊಡನೆ ಸ್ಕಾಫರ್‌ನ ತಂಡ